**ಓ ಎಸ್ ನಂಃ 403/2014**

**ಪಿ. ಡಬ್ಲ್ಯೂ ಃ 1**

**ದಿಃ 20.01.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ 11 ಮತ್ತು ಇತರರ ಪರ ಶ್ರೀ ಎನ್ ಎಸ್ ವಕೀಲರಿಂದ ಃ**

ದಾವಾ ಹಾಕುವ ಸಮಯದಲ್ಲಿ ಐಟಂ ನಂಬರ್ 4 ಸ್ವತು ಭೂ ಪರಿವರ್ತನೆ ಆಗಿತ್ತು ಎಂದರೆ ಸಾಕ್ಷಿ ಆ ಸಮಯದಲ್ಲಿ ನಮಗೆ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ನಿ ಪಿ 10 ರಲ್ಲಿ ಭೂ ಪರಿವರ್ತನೆ ಆದ ಬಗ್ಗೆ ಬರೆದಿದೆ ಎಂದರೆ ಸರಿ. 37 ನೆ ಪ್ರತಿವಾದಿಯು ದಿನಾಂಕಃ 24.07.2010 ರಲ್ಲಿ ಪ್ರದೀಪ್ ಕೃಷ್ಣಪ್ಪ ಇವರಿಗೆ ಜಂಟಿ ಅಭಿವೃದ್ದಿ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿ ನಮಗೆ ಗೊತ್ತಿಲ್ಲದಂತೆ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ದಾವಾ ಹಾಕುವ ಸಮಯದಲ್ಲಿ ಇಸಿ ಮತ್ತು ಪಹಣಿಗಳನ್ನು ನೋಡಿದ್ದೇನು. ಅವುಗಳೆಲ್ಲ ಬದಲಾಗಿದ್ದವು. ದಾವಾ ಸಲ್ಲಿಸುವ ಮೊದಲೆ ಐಟಂ 4 ರಲ್ಲಿ ಲೇಔಟ್ ಮಾಡಿ 100 ನಿವೇಶನಗಳನ್ನು ಮಾಡಿ ಎಲ್ಲವನ್ನು ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ.

ಪ್ರದೀಪ್ ಕೃಷ್ಣಪ್ಪ ಇವರಿಗೆ ಜೆ ಡಿ ಯಾಗಿರುವುದು ನನಗೆ ಗೊತ್ತಿರಲಿಲ್ಲ ಹಾಗಾಗಿ ಅವರನ್ನು ಪಾರ್ಟಿ ಮಾಡಿರಲಿಲ್ಲ. ಪ್ರದೀಪ್ ಕೃಷ್ಣಪ್ಪ ಇವರಿಗೆ ಕ್ರಯ ಮಾಡಿದ್ದು ನನಗೆ ಗೊತ್ತಿಲ್ಲ. ಅಲ್ಲಿ ನಿವೇಶನಗಳನ್ನು ಮಾಡಿ 100 ನಿವೇಶನಗಳನ್ನು ಮಾರಾಟ ವ ಮಾಡಿರವುದು ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಸ.ನಂ. 57 ವ್ಯವಸಾಯದ ಜಮೀನು ಇರುತ್ತದೆ. ಈಗಲೂ ಸಹ ಅಲ್ಲಿ ವ್ಯವಸಾಯ ಮಾಡುತ್ತಾರೆ. ಭೂ ಪರಿವರ್ತನೆ ಆದ ನಂತರ ವ್ಯವಸಾಯ ಮಾಡಲು ಸಾದ್ಯವಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 4 ಕ್ಕೆ ಸಂಬಂದಿಸಿದಂತೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸ.ನಂ. 50 ಇದು 2 ಎಕರೆ 26 ಗುಂಟೆ ಎಂದರೆ ಸರಿ. ಆ ಸ್ವತ್ತು ಗಂಗಯ್ಯ ಇವರ ಹೆಸರಿನಲ್ಲಿತ್ತು. ಆದರೆ ಅದು ಗಂಗಯ್ಯ ಇವರ ಸ್ವತ್ತು ಅಲ್ಲ, ಅದು ಒಟ್ಟು ಕುಟುಂಬದ ಸ್ವತ್ತು ಎಂದು ಸಾಕ್ಷಿ ಹೇಳುತ್ತಾರೆ. ಕ್ರಯ ಯಾರ ಹೆಸರಿನಲ್ಲಿ ಆಗಿದೆ ಎಂದು ನನಗೆ

ಗೊತ್ತಿಲ್ಲ. ಸ.ನಂ. 50 ಮುದ್ದಬಸವಯ್ಯ ಇವರ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ಮುದ್ದಬಸವಯ್ಯ

ಇವರಿಂದ ಈರಯ್ಯ ಇವರು ಕ್ರಯಕ್ಕೆ ತೆಗೆದುಕೊಂಡರು ಎಂದರೆ ನನಗೆ ಗೊತ್ತಿಲ್ಲ. ಆದರೆ ಒಟ್ಟು ಕುಟುಂಬದಲ್ಲಿ ತೆಗೆದುಕೊಂಡಿದ್ದಾರೆ ಎಂದು ಮಾತ್ರ ಗೊತ್ತು ಎಂದು ಸಾಕ್ಷಿ ಹೇಳುತ್ತಾರೆ. ಸ.ನಂ. 50 ದ್ಯಾವಲಿಂಗಯ್ಯ ಇವರ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ಆದರೆ ಆರ್ ಟಿ ಸಿ ಯಲ್ಲಿ ಅವರ ಹೆಸರು ಬರುತ್ತಿದ್ದರಿಂದ ಅವರ ಹೆಸರನ್ನು ವಾದಪತ್ರದಲ್ಲಿ ಸೇರಿಸಿದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ. ಸ.ನಂ. 50 ರ ಸ್ವತ್ತು ದ್ಯಾವಲಿಂಗಯ್ಯ ಇವರ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ಮುದ್ದಬಸಪ್ಪ ಇವರಿಂದ ಈರಯ್ಯ ಇವರು ಕ್ರಯಕ್ಕೆ ಪಡೆದ ಸ್ವತ್ತು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ. 50 ನ್ನು ಗಂಗಯ್ಯ ಇವರು 38 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಿ ಪಿ 16 ಆ ಕ್ರಯಪತ್ರ ಇರುತ್ತದೆ ಎಂದರೆ ಸರಿ. ಆ ಕ್ರಯಪತ್ರದಲ್ಲಿ ದಿನಾಂಕಃ 1.02.1984 ವಿಭಾಗ ಆಗಿ ಆ ವಿಭಾಗದಲ್ಲಿ ಗಂಗಯ್ಯ ಇವರಿಗೆ ಬಂದ ಸ್ವತ್ತನ್ನು ಮಾರಾಟ ಮಾಡುತ್ತಿದ್ದೇನೆ ಎಂದು ಅವರು ಬರೆದಿದ್ದಾರೆಂದರೆ ಸಾಕ್ಷಿ ಇರಬಹುದು, ವಿಭಾಗ ಆಗಿಲ್ಲ ಎಂದು ಹೇಳುತ್ತಾರೆ. ದಾವಾ ಸ್ವತ್ತುಗಳು ನಮ್ಮ ತಾತನ ಕಾಲದಿಂದಲೂ ಯಾವುದೆ ವಿಭಾಗ ಆಗಿಲ್ಲ. ನಾನು 1986 ರಲ್ಲಿ ಹುಟ್ಟಿಲ್ಲ, 1982 ರಲ್ಲಿ ಹುಟ್ಟಿದ್ದೇನೆ. ಈರಯ್ಯ, ಗಂಗಯ್ಯ ಮತ್ತು ನಿಂಗಯ್ಯ ಇವರ ಮದ್ಯೆ ವಿಭಾಗ ಆದಾಗ ನಾನು ಹುಟ್ಟಿರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ವಿಭಾಗ ಆಗಿಲ್ಲ ಎಂದು ಹೇಳುತ್ತಾರೆ. ಆ ವಿಭಾಗದಲ್ಲಿ ಮೇಲೆ ಹೇಳಿದವರಿಗೆ ಸ್ವತ್ತುಗಳು ಹಂಚಿಕೆಯಾಗಿವೆ ಎಂದರೆ ಸರಿಯಲ್ಲ. ಈರಯ್ಯ, ಗಂಗಯ್ಯ ಮತ್ತು ನಿಂಗಯ್ಯ ಇವರ ಮದ್ಯೆ ಆದ ವಿಭಾಗವನ್ನು ಪ್ರಶ್ನಿಸಿ ಯಾವುದೆ ಅಪೀಲು ಮಾಡಿಲ್ಲ. 26/1983-84 ರ ಇದರ ಪ್ರಕಾರ ಈರಯ್ಯ, ಗಂಗಯ್ಯ ಮತ್ತು ನಿಂಗಯ್ಯ ಇವರ ಹೆಸರಿನಲ್ಲಿ ಖಾತೆ ಬದಲಾವಣೆ ಆಗಿದೆ ಎಂಬ ಪ್ರಶ್ನೆಗೆ ಸಾಕ್ಷಿ ಖಾತೆ ಆಗಿಲ್ಲ ಎಂದು ಹೇಳುತ್ತಾರೆ.

ಸ.ನಂ. 23 ಮೂಲತಃ ತೋಟಿ ತಳವಾರಿಕೆ ಜಮೀನು ಇರುತ್ತದೆ. ಸ.ನಂ 23 ರ ಆರ್ ಟಿ ಸಿ ಕೊಟ್ಟಿದೇನೆ ಎಂದರೆ ಸರಿ. ಅದರಲ್ಲಿ ನಮಗೆ ಬರಬೇಕಾದ ಸ್ವತ್ತು ಯಾರ ಹೆಸರಿನಲ್ಲಿದೆ ಅವರನ್ನು ಮಾತ್ರ ಪಾರ್ಟಿ ಮಾಡಿದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ. ಗಂಗಯ್ಯ ಬಿನ್ ದ್ಯಾವಲಿಂಗಯ್ಯ ನಮ್ಮ ಚಿಕ್ಕ ತಾತ ಇರುತ್ತಾರೆ. ಸ.ನಂ. 23 ರಲ್ಲಿ 20 ಗುಂಟೆ ಸ್ವತ್ತು ಬರುತ್ತಿದೆ ಎಂದರೆ ಸರಿ. ಪಹಣಿಯಲ್ಲಿ 20 ಗುಂಟೆ ಇರುವುದರಿಂದ ಅಷ್ಟನ್ನು ಮಾತ್ರ ದಾವೆಯಲ್ಲಿ ಸೇರಿಸಿದ್ದೇವೆ. ನಿ ಪಿ 1 ರಲ್ಲಿರುವ ಎಲ್ಲ ವ್ಯಕ್ತಿಗಳನ್ನು ಪಾರ್ಟಿ

ಮಾಡಿಲ್ಲ ಎಂದರೆ ಸರಿ ಮತ್ತು ಒಟ್ಟು ವಿಸ್ತೀರ್ಣಕ್ಕಾಗಿ ದಾವೆ ಮಾಡಿಲ್ಲ ಎಂದರೆ ಸರಿ. ಎ ಸಿ ರಾಮನಗರ ಹೆಚ್ ಒ ಎಂ 257/69-70 ರಲ್ಲಿ ದಿನಾಂಕಃ 22.08.1974 ರಲ್ಲಿ ದೊಡ್ಡಮಾರನಹಳ್ಳಿ ಸ.ನಂ. 23 ಕ್ಕೆ ಸಂಬಂಧಿಸಿದಂತೆ 3 ಜನರ ಹೆಸರನ್ನು ನಮೂದಿಸಿ ಅವರಿಗೆ ತಲಾ ಮೂರನೆ ಒಂದು ಭಾಗದ

ಸ್ವತ್ತು ಬರುತ್ತದೆ ಎಂದು ಆದೇಶವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಈ ವಿಷಯ ನನಗೆ ಗೊತ್ತಿದ್ದರೂ ಸಹ ದ್ಯಾವಲಿಂಗಯ್ಯ ಇವರಿಗೆ ಸೇರಿದ ಸ್ವತ್ತು ಎಂದು ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 1 ರ ಸ್ವತ್ತು ದ್ಯಾವಲಿಂಗಯ್ಯ ಇವರಿಗೆ ಮಂಜೂರಾದ ಸ್ವತ್ತು ಎಂದು ಸಾಕ್ಷಿ ಹೇಳುತ್ತಾರೆ. ದ್ಯಾವಲಿಂಗಯ್ಯ ಇವರಿಗೆ ಜಮೀನು ಮಂಜೂರಾದ ನಂತರ ಈರಯ್ಯ ಮತ್ತು ಇತರರಿಗೆ ಆಗಿದೆ. ಸ.ನಂ. 23 ಇದಕ್ಕೆ ಸಂಬಂಧಿಸಿದಂತೆ 2010 ಪಹಣಿಗಳನ್ನು ಬಿಟ್ಟರೆ ಬೇರೆ ಯಾವುದೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿ. ನಿಜವಾದ ವಿಷಯವನ್ನು ಮುಚ್ಚಿಟ್ಟು ನಾವು ಸುಳ್ಳು ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ.

ಸ.ನಂ. 26 ರಲ್ಲಿ 1 ಎಕರೆ 20 ಗುಂಟೆ ಒಟ್ಟು ಕುಟುಂಬಕ್ಕೆ ಸೇರಿದ ಸ್ವತ್ತು. ಅದರಲ್ಲಿ ಈರಯ್ಯ ಮತ್ತು ದ್ಯಾವಲಿಂಗಯ್ಯ ಇವರ ಹೆಸರಿದೆ. ಸ.ನಂ. 26 ಸಹ ತಳವಾರಿಕೆ ಇನಾಂ ಜಮೀನು ಎಂದರೆ ಸರಿ. ಅದರ ಆರ್ ಟಿ ಸಿ ಯಲ್ಲಿ 19 ಗುಂಟೆ ಗಂಗಯ್ಯ ಬಿನ್ ದ್ಯಾವಲಿಂಗಯ್ಯ ಇವರ ಹೆಸರಿನಲ್ಲಿದೆ ನಮೂದಾಗಿದೆ ಎಂದರೆ ಸರಿ. 2010-11 ರ ಆರ್ ಟಿ ಸಿ ಯನ್ನು ಬಿಟ್ಟರೆ ಸ.ನಂ. 26 ಕ್ಕೆ ಸಂಬಂಧಿಸಿದ ಯಾವುದೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿ. ದಿನಾಂಕ ಃ 06.05.1975 ರಂದು ಈರಯ್ಯ ಇವರು ಲಿಂಗಯ್ಯ ಬಿನ್ ಹನುಮಂತಪ್ಪ ಮತ್ತು ಗಾಳಿಹನುಮಯ್ಯ ಬಿನ್ ಚಿಕ್ಕಕುಳ್ಳಯ್ಯ ಇವರಿಂದ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈರಯ್ಯ ಇವರಿಗೆ ಸೇರಿದ ಸ್ವತ್ತನ್ನು ದಾವೆಯಲ್ಲಿ ತಪ್ಪಾಗಿ ಸೇರಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ 2 ರಲ್ಲಿ 1 ಎಕರೆ ಈರಯ್ಯ ಇವರ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿ. ಅದು ಈರಯ್ಯ ಇವರು ಕ್ರಯಕ್ಕೆ ಕೊಂಡ ಸ್ವತ್ತಾಗಿರುವುದರಿಂದ ಅದು ಅವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ.

ಸ.ನಂ. 26 ಇದನ್ನು ಎ ಸಿ ರಾಮನಗರ ಇವರು ಈರಯ್ಯ, ಗಂಗಯ್ಯ ಮತ್ತು ನಿಂಗಯ್ಯಇವರಿಗೆ 1 ಎಕರೆ 3 ನೇ ಭಾಗವನ್ನು ಜಂಟಿಯಾಗಿ ಮಂಜೂರು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಮಂಜೂರಾಗಿದ್ದರೂ ಸಹ ಅದು ಒಟ್ಟು ಕುಟುಂಬದ

ಸ್ವತ್ತು ಎಂದು ಸುಳ್ಳು ದಾವೆ ಮಾಡಿದ್ದೇನೆ ೦ದರೆ ಸರಿಯಲ್ಲ. ದಾವಾ ಐಟಂ ನಂಬರ್ 3 ರ ಚೆಕ್ ಬಂದಿ ಮತ್ತು ವಿಸ್ತೀರ್ಣ ತಪ್ಪಾಗಿ ನಮೂದಿಸಿದ್ದೇನೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ವಾದಪತ್ರದಲ್ಲಿ ಐಟಂ ನಂಬರ್ ನಂತೆ 3 ಕ್ಕೆ ತೋರಿಸಿದ ಚೆಕ್ ಬಂದಿ ಮತ್ತು ವಿಸ್ತೀರ್ಣ ದಂತೆ ಸ್ಥಳದಲ್ಲಿ ಯಾವುದೆ ಸ್ವತ್ತು ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 4 ಸ.ನಂ. 57 ರ 5 ಎಕರೆ 14 ಗುಂಟೆ ಇದನ್ನು ಗಂಗಯ್ಯ, ಈರಯ್ಯ ಮತ್ತು ನಿಂಗಯ್ಯ ಇವರ

ಜಂಟಿಯಾಗಿ ಕ್ರಯಕ್ಕೆ ತೆಗೆದುಕೊಂಡಿದ್ದಾರೆ. ನಾನು ಆರ್ ಟಿ ಸಿ ಯನ್ನು ಹೊರತುಪಡಿಸಿ ಐಟಂ ನಂಬರ್ 4 ಸ್ವತ್ತಿಗಾಗಿ ಬೇರೆ ಯಾವುದೆ ದಾಖಲೆಯನ್ನು ಕೊಟ್ಟಿಲ್ಲ ಎಂದರೆ ಸರಿ. ಸ.ನಂ. 57 ರಲ್ಲಿ 2 ಎಕರೆ 27 ಗುಂಟೆ ಬೀರಪ್ಪ ಇವರಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ಆ ಸ್ವತ್ತನ್ನು ಬೀರಪ್ಪ ಕ್ರಯಪತ್ರದ ಮೂಲಕ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಬೀರಪ್ಪ , ಶಿವರುದ್ರಯ್ಯ , ವೀರಭದ್ರಪ್ಪ ಮತ್ತು ಚನ್ನಪ್ಪ ಇವರು ನಮ್ಮ ಕುಟುಂಬದವರಲ್ಲ ಎಂದರೆ ಸರಿ.

ದಿನಾಂಕ : 4.1.1938 ರಲ್ಲಿ ಈರಮ್ಮ ಇವರು ಗೊರಮಲ್ಲಯ್ಯ ಇವರ ಮಗ ಚಿಕ್ಕಮಲ್ಲಯ್ಯ ಇವರಿಂದ 2 ಎಕರೆ 30 ಗುಂಟೆ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಉಳಿದ 2 ಎಕರೆ 17 ಗುಂಟೆಯನ್ನು ದ್ಯಾವಲಿಂಗಯ್ಯ ಕ್ರಯಕ್ಕೆ ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ. ಸ.ನಂ. 57 1938 ರಲ್ಲಿ ಪಡ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ದಿನಾಂಕ : 10.09.2007 ರಲ್ಲಿ ಈರಮ್ಮ ರವರ ಮೊಮ್ಮಗ ಬೀರೇಶ್ ಇವರು ಪಡ ರಿಸ್ಟೋರ್ ಮಾಡಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಗಾಳಿಹೊನ್ನಮ್ಮ ಇವರು ಅದೇ ದಿನ ಪಡ ಬಿಡುಗಡೆ ಮಾಡಬೇಕೆಂದು ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಕಂದಾಯವನ್ನು ಸಂಪೂರ್ಣ ವಾಗಿ ಪಾವತಿ ಮಾಡಿದ್ದರಿಂದ ಸ.ನಂ. 57 ರ ಪಡ ವಜಾ ಮಾಡಿ ಸಾಗುವಳಿ ಯೋಗ್ಯ ಜಮೀನು ಎಂದು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸ.ನಂ. 57 ಇದು ಈರಮ್ಮ ನ ಮಕ್ಕಳು ಮತ್ತು ಮೊಮ್ಮಕ್ಕಳಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ . ಅದೇ ಕಾರಣಕ್ಕೆ ಅವರು ಪಡ ಬಿಡುಗಡೆ ಮಾಡಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈರಮ್ಮನ ಮಕ್ಕಳು ಮತ್ತು ಮೊಮ್ಮಕ್ಕಳನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ ಎಂದರೆ ಸರಿ. ನಮ್ಮ ಕುಟುಂಬಕ್ಕೂ ಮತ್ತು ಅವರ ಕುಟುಂಬಕ್ಕೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿ.

ಸ.ನಂ. 22/2 ಇದು ಹಳೆ ನಂಬರ್ ಎಂದರೆ ಸರಿಯಲ್ಲ. ಅದರ ಹೊಸ ನಂಬರ್ 62/2 ಎಂದರೆ ಸರಿ. ಈ ಸ್ವತ್ತು ಈರಯ್ಯ ಇವರಿಗೆ ದರ್ಕಾಸ್ ನಲ್ಲಿ ಮಂಜೂರಾಗಿದೆ ಎಂದರೆ ಸರಿ. ಅದು ಒಟ್ಟು ಕುಟುಂಬದ ಪರವಾಗಿ ಆಗಿದೆ ಎಂದು ಸಾಕ್ಷಿ ಹೇಳುತ್ತಾರೆ. ಈರಯ್ಯ ಮನೆಯ ಹಿರಿಯ ಮಗನಾಗಿದ್ದರಿಂದ ಅವರ ಹೆಸರಿನಲ್ಲಿ ಮಂಜೂರು ಮಾಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಸ.ನಂ. 22/2 ಹೊಸ ನಂಬರ್ 62/2 ಇದು ಈರಯ್ಯ ಇವರು ಮೃತಪಟ್ಟ ನಂತರ ಗಾಳಿಹನುಮಯ್ಯ ಮತ್ತು ಆಂಜನಪ್ಪ ಇವರ ಹೆಸರಿನಲ್ಲಿ ಎಂ ಆರ್ ನಿ ಪಿ 15 ರಂತೆ ಪಹಣಿ ಬರುತ್ತಿವೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 5 ರ ಸ್ವತ್ತಿಗೆ ಸಂಬಂಧಿಸಿದಂತೆ ಪಹಣಿಯನ್ನು ಹೊರತುಪಡಿಸಿ ನಾನು ಬೇರೆ ಯಾವುದೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿ. ದಾವಾ ಐಟಂ 5 ಇದು ಈರಯ್ಯ ಇವರಿಗೊಬ್ಬರಿಗೆ

ಮಂಜೂರಾದ ಸ್ವತ್ತು ಎಂದರೆ ಸರಿಯಲ್ಲ. ಈ ವಿಷಯ ನನಗೆ ಗೊತ್ತಿದ್ದರೂ ಸಹ ಆ ಸ್ವತ್ತಿನಲ್ಲಿ ಭಾಗ ಬರಬೇಕೆಂದು ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಎಂ ಆರ್ ನ್ನು ಪ್ರಶ್ನಿಸಿ ನಾನು ಯಾವುದೆ ಕೇಸ್ ಮಾಡಿಲ್ಲ. ಆ ಸ್ವತ್ತಿನಲ್ಲಿ ಸಹ ನಮ್ಮ ತಾತ ನಿಂಗಯ್ಯನಿಗೆ ಯಾವುದೆ ಭಾಗ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಬಿ ಸ್ವತ್ತು ದೊಡ್ಡಮಾರನಹಳ್ಳಿ ಇರುವ ಮನೆಯದು ಇರುತ್ತದೆ. ಅದು ದ್ಯಾವಲಿಂಗಯ್ಯ ಇವರ ಹೆಸರಿನಲ್ಲಿತ್ತು.

ಷೆಡ್ಯೂಲ್ ಬಿ ಸ್ವತ್ತಿಗಾಗಿ ನಾನು ಯಾವುದೆ ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ ಸರಿ. ಷೆಡ್ಯೂಲ್ ಬಿ ಸ್ವತ್ತು ಸ.ನಂ. 44/3 ರಲ್ಲಿ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಸ್ವತ್ತು ಈರಯ್ಯ ಇವರು ಹೊನ್ನಯ್ಯ ಬಿನ್ ಯಳವಯ್ಯ ಇವರಿಂದ ದಿನಾಂಕ : 28.12.1950 ರಲ್ಲಿ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ಸಾಕ್ಷಿ ಒಟ್ಟು ಕುಟುಂಬದಲ್ಲಿ ತೆಗೆದುಕೊಂಡ ಸ್ವತ್ತು ಎಂದು ಹೇಳುತ್ತಾರೆ. ಅದು ಈರಯ್ಯ ಇವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಅದರಲ್ಲಿ ಈರಯ್ಯ ಇವರನ್ನು ಹೊರತುಪಡಿಸಿ ಬೇರೆ ಯಾರಿಗೂ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ದ್ಯಾವಲಿಂಗಯ್ಯ ಇವರ ಹೆಸರಿನಲ್ಲಿರುವ ನಾಯಿ ಇನಾಂ ಜಮೀನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಅದನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಸ.ನಂ. 25 6 ಎಕರೆ 35 ಗುಂಟೆ ದ್ಯಾವಲಿಂಗಯ್ಯ ಇವರ ಹೆಸರಿನಲ್ಲಿತ್ತು ಎಂದರೆ ಸರಿ. ಅದನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸ.ನಂ. 9/1 ರ 1 ಎಕರೆ 10 ಗುಂಟೆ ದ್ಯಾವಲಿಂಗಯ್ಯ ಇವರ ಹೆಸರಿನಲ್ಲಿತ್ತು ಎಂದರೆ ಸರಿ. ಅದನ್ನು ಈ

ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸ.ನಂ. 46 ರ 1 ಎಕರೆ 30 ಗುಂಟೆ ದ್ಯಾವಲಿಂಗಯ್ಯ ಇವರ ಹೆಸರಿನಲ್ಲಿತ್ತು ಎಂದರೆ ಸರಿ. ಅದನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.